**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 223/2016**

ಸಿಡಬ್ಲ್ಯೂಃ 8

ಪಿಡಬ್ಲ್ಯೂಃ 6

| | | |
|---|---|---|
| ಸಾಕ್ಷಿಯ ಹೆಸರು | : | ದಾದಾಪೀರ ಕೋಡ |
| ತಂದೆಯ ಹೆಸರು | : | ಅಬ್ದುಲ್ ಸಾಬ್ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಾಗಿನೆಲೆ |

ಇಂದು ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ-1 ನನ್ನ ಅಣ್ಣನ ಮಗಳು. ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ-1 ರವರು ಹಾಗೂ 1 ನೇ ಆರೋಪಿಯ ಮದುವೆ ದಿನಾಂಕ 23-01-2014 ರಂದು ಕಾಗಿನೆಲೆಯಲ್ಲಿ ಮದುವೆಯಾಗಿರುತ್ತದೆ. ಮದುವೆಯಾದ ನಂತರ ಚಾಸಾ-1 ರವರು ತನ್ನ ಗಂಡನ ಮನೆಯಾದ ಚಿಕ್ಕೇರೂರನಲ್ಲಿ ವಾಸವಾಗಿದ್ದರು. ಕೆಲ ಸಮಯದವರೆಗೆ ಆರೋಪಿತರು ಚಾಸಾ-1 ರವರು ಚೆನ್ನಾಗಿದ್ದರು. ನಂತರ ಚಾಸಾ-1 ರವರ ಅತ್ತೆ ಮತ್ತು ಮಾವ ಕಿರುಕುಳ ನೀಡುತ್ತಿದ್ದರು. ಆಗ ನನ್ನ ಬಳಿ ಬಂದಿದ್ದು, ನಾನು ಪಂಚಾಯತಿಯನ್ನು ಮಾಡಿರುತ್ತೇನೆ. ನಂತರ ನಾನು ಬುದ್ದಿವಾದ ಹೇಳಿ ಅವರನ್ನು ಕಳುಹಿಸಿಕೊಟ್ಟಿರುತ್ತೇನೆ. ಆ ರೀತಿ ನಾನು 3-4 ಬಾರಿ ಆರೋಪಿತರಿಗೆ ಬುದ್ದಿವಾದ ಹೇಳಿ ಕಳುಹಿಸಿರುತ್ತೇನೆ. ಚಾಸಾ-1 ರವರ ಅತ್ತೆ ಮಾವ ಕಿರುಕುಳ ನೀಡಲು ಮತ್ತೆ ಪ್ರಾರಂಭಿಸಿರುತ್ತಾರೆ. ಚಾಸಾ-1 ರವರು ನನ್ನ ಬಳಿ 2 ನೇ ಆರೋಪಿ ಚಾಸಾ-1 ರವರನ್ನು ಉದ್ದೇಶಿಸಿ ನಿನಗೆ ಸಣ್ಣ ಮಗಳು ಇದ್ದಾಳೆ ಎಂದು ಬಿಟ್ಟಿರುತ್ತೇನೆ ಇಲ್ಲದಿದ್ದರೆ ನಿನಗೆ ಕುತ್ತಿಗೆಗೆ ಹಗ್ಗ ಹಾಕಿ ಬಿಗಿದು ಬಿಡುತ್ತಿದ್ದೆ ಎಂದು ಹೇಳಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ನಂತರ ನಾವು ಆರೋಪಿತರನ್ನು ಚಾಸಾ-1 ರವರು ಹೇಳಿದ ಮೇರೆಗೆ ಕರೆಸಿರುತ್ತೇವೆ. ನಾನು ಅಂಜುಮನ್ ನ ಸದಸ್ಯನಾಗಿದ್ದು ನಿಜವಾದ ವಿಚಾರ ಏನು ಎಂದು ಆರೋಪಿತರ ಬಳಿ ಕೇಳಿದಾಗ 2 ನೇ ಆರೋಪಿ ನನ್ನಿಂದ ತಪ್ಪಾಗಿದೆ ಎಂದು ಒಪ್ಪಿಕೊಂಡಿರುತ್ತಾರೆ. ನಂತರ ನಾವು ಚಾಸಾ-1 ರವರನ್ನು ಆರೋಪಿ ಮನೆಗೆ ಹೋಗಲು ಹೇಳಿರುತ್ತೇನೆ ಆದರೆ ಚಾಸಾ-1 ರವರು ಹೆದರಿಕೊಂಡು ಒಪ್ಪಿರುವುದಿಲ್ಲ.

<u>**ಪಾಟೀ ಸವಾಲುಃ**</u> ಆರೋಪಿತರ ಪರ ಶ್ರೀ ವಿ ವಿ ಎಂ ವಕೀಲರಿಂದಃ

ಚಾಸಾ-1 ಹಾಗೂ 1 ನೇ ಆರೋ ಪಿ ಅವರ ಸಂಬಂದ ಚೆನ್ನಾಗಿ ಇರುವಾಗಲೂ ಹಾಗೂ ಹದೆಗೆಟ್ಟಾಗಲೂ ನಾನು ಚಿಕ್ಕೇರೂರ ಗ್ರಾಮಕ್ಕೆ ಹೋಗಿರುತ್ತೇನೆ. ಚಿಕ್ಕೇರೂರ ನಲ್ಲಿ ಅಂಜುಮನ್ ಸಂಸ್ಥೆ ಇದೆ ಎಂದರೆ ಸರಿ. ಸದರಿ ಅಂಜುಮನ್ ಸದಸ್ಯರು ನನಗೆ ಪರಿಚಯ ಇರುವುದಿಲ್ಲ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರವನ್ನು ಎಲ್ಲಿಯೂ ಕೂಡ ಹೇಳಿರುವುದಿಲ್ಲ. ಚಾಸಾ-1 ರವರ ಮದುವೆಯಾದ 1 ವರ್ಷದ ಒಳಗೆ 2 ನೇ ಆರೋಪಿ ಚಾಸಾ-1 ರವರ ಕುತ್ತಿಗೆಗೆ ಹಗ್ಗವನ್ನು ಬಿಗಿಯುತ್ತಿದ್ದೆ ಎಂದು ಹೇಳಿರುತ್ತಾರೆ. ಚಾಸಾ-1 ರವರು ಅಂದಿನಿಂದ ಇಲ್ಲಿಯವರೆಗೂ ತನ್ನ ತವರು ಮನೆಯಲ್ಲಿ ಇದ್ದಾರೆ. ಆರೋಪಿತರು ಚಾಸಾ-1 ರವರನ್ನು ಕರೆಯಲು ಬಂದಿರುವೂದಿಲ್ಲ ಹಾಗೂ ಚಾಸಾ-1 ರವರು ಆರೋಪಿಯ ಮನೆಗೆ ಹೋಗಿರುವುದಿಲ್ಲ.

2. ಚಾಸಾ-1 ರವರು ನನ್ನ ಅಣ್ಣನ ಮಗಳಾಗಿರುವ ಕಾರಣದಿಂದ ನಾನು ಸುಳ್ಳು ಸಾಕ್ಷ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.